**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಮದ್ದೂರು.**

**ಸಿ.ಸಿ.2225/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | - ಸೋಮಶೇಖರ | | ಚಾ ಸಾ -2 |
| ತಂದೆಯ ಹೆಸರು | - ಸಿದ್ದೇಗೌಡ | | ಪ್ರಾ ಸಾ -1 |
| ವಯಸ್ಸು | - 58 ವರ್ಷ | | |
| ಉದ್ಯೋಗ | - ವ್ಯವಸಾಯ | | |
| ವಾಸ ಸ್ಥಳ | - ಮದ್ದೂರು | | |

ದಿನಾಂಕಃ 31.01.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:ಅಭಿಯೋಜನೆಯ ಪರಃ ಎಪಿಪಿ ಯವರಿಂದ:**

ದಿ.02.05.2018 ರಂದು ನಾನು ಸೊಪ್ಪು ತರಲು ನಮ್ಮ ಮನೆಯ ಮುಂದೆ ಹೋಗುತ್ತಿದ್ದು, ಬೆಳಿಗ್ಗೆ ಸುಮಾರು 10.05 ಗಂಟೆ ಸಮಯದಲ್ಲಿ ನನ್ನ ಮುಂದೆ 1 ನೇ ಆರೋಪಿ ಹೋಗುತ್ತಿದ್ದು, 5 ನೇ ಮೈನ್ ರಸ್ತೆಯಿಂದ ಒಂದು ಕೆಂಪು ಬಣ್ಣದ ದ್ವಿ ಚಕ್ರ ವಾಹನ ಕೆಎ-11-ಬಿ-9511 ಬಂದು 1 ನೇ ಆರೋಪಿಯ ಕೆಎ-11-ಬಿ-1664 ಆಕ್ಟಿವಾ ದ್ವಿ ಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿರುತ್ತದೆ. 1 ನೇ ಆರೋಪಿ ಬಲಭಾಗಕ್ಕೆ ಬಿದ್ದು ಹೋಗಿರುತ್ತಾರೆ. ನಾನು ಅವರನ್ನು ಹೋಗಿ ನೋಡಿರುತ್ತೇನೆ, ಅಷ್ಟರಲ್ಲಿ 2 ನೇ ಆರೋಪಿ ತನ್ನ ವಾಹನವನ್ನು ನಿಲ್ಲಿಸಿಕೊಂಡರು. 1 ನೇ ಆರೋಪಿಗೆ ಪ್ರಜ್ಞೆ ತಪ್ಪಿದ್ದು ಅವರ ಬಲಗಾಲಿಗೆ ಹಾಗೂ ಕಿವಿಯ ಬಳಿ ಗಾಯಗಳಾಗಿರುತ್ತದೆ. ನಾನು 1 ನೇ ಆರೋಪಿಯ ಅಣ್ಣನಿಗೆ ಕರೆ ಮಾಡಿ ಅಪಘಾತದ ವಿಚಾರ ತಿಳಿಸಿರುತ್ತೇನೆ. ಅಲ್ಲಿಯೇ ಇದ್ದ ಯಾರೋ ಮನೆಯವರು ಕಾರು ತೆಗೆದುಕೊಂಡು ಬಂದಿದ್ದು, 1 ನೇ ಆರೋಪಿಯನ್ನು ಸದರಿ ಕಾರಿನಲ್ಲಿ ಮದ್ದೂರು ಮೆಡಿಕಲ್ ಸೆಂಟರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

ಇನ್ನೊಂದು ಆಕ್ಟಿವಾ ಚಾಲನೆ ಮಾಡುತ್ತಿದ್ದ ವ್ಯಕ್ತಿ 2 ನೇ ಆರೋಪಿಯಾಗಿದ್ದು ಅವರ ಪರಿಚಯ ನನಗಿತ್ತು. ಕೆಎ-11-ಬಿ-9511 ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ. ಅವರು ಅತಿ ವೇಗವಾಗಿ ಚಾಲನೆ ಮಾಡಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ.

ಈಗ ನೋಡುತ್ತಿರುವ ಸಹಿ ನನ್ನದೇ. ಸ್ಥಳ ಮಹಜರಿನಲ್ಲಿ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಚಾಸಾ-1 ರವರೊಂದಿಗೆ ಠಾಣೆಗೆ ಹೋದಾಗ ಮಾಡಿರುತ್ತೇನೆ. ನನಗೆ ದೂರವಾಣಿ ಮುಖಾಂತರ ನನ್ನ ವಿಳಾಸ ಕೇಳಿಕೊಂಡಿರುತ್ತಾರೆ, ನಾನು ಬೇರೆ ಎಲ್ಲಿಯೂ ಹೋಗಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಎ ಪಿ ಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ  ಮಾನ್ಯ ಎ ಪಿ ಪಿ ಯವರಿಂದಃ</u>**

ನಾನು ನನ್ನ ಹೇಳಿಕೆಯಲ್ಲಿ ಇಬ್ಬರು ಅಕ್ಟಿವಾ ಸವಾರರ ಅತಿವೇಗ ಮತ್ತು ನಿರ್ಲಕ್ಷತನದಿಂದ ಅಪಘಾತ ಸಂಭವಿಸಿರುತ್ತದೆ ಹಾಗೂ ಇಬ್ಬರ ತಪ್ಪು ಇರುತ್ತದೆ ಎಂದು ಪೊಲೀಸರಿಗೆ ದಿ.11.05.2018 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಸದರಿ ಭಾಗವನ್ನು ನಿಪಿ-2 ಎಂದು ಗುರುತಿಸಲಾಯಿತು.

ಪೋಲಿಸರು ದಿ.11.05.2018 ರಂದು ಘಟನಾ ಸ್ಥಳಕ್ಕೆ ಬಂದಿದ್ದು ಅಪಘಾತ ಸ್ಥಳವನ್ನು ನಾನು ತೋರಿಸಿದ ಮೇರೆಗೆ ಚಾಸಾ-10 ಮತ್ತು 11 ರವರ ಸಮಕ್ಷಮ ಬೆಳಿಗ್ಗೆ 9.00 ರಿಂದ 10.00 ಗಂಟೆಯವರೆಗೂ ನಿಪಿ-1 ರಂತೆ ಮಹಜರು ಮಾಡಿ ಕೆಎ-11 ಬಿ-1664 ಅಕ್ಟಿವಾ ಬೈಕನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ಸ್ಥಳದಲ್ಲಿ ಹಾಜರಿದ್ದು ನಿಪಿ-1 ಕ್ಕೆ ಸಹಿ ಮಾಡಿರುತ್ತೆನೆ ಎಂದರೆ ಸರಿಯಲ್ಲ.

ನನಗೆ ನಿಪಿ-1 ಹಾಗೂ 2 ರ ಎಲ್ಲಾ ವಿಚಾರ ಗೊತ್ತಿದ್ದರೂ 1 ನೇ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2 ನೇ ಆರೋಪಿ ಪರ ಮಾನ್ಯ ಶ್ರೀ. ವಿ ಎನ್ ಎಸ್ ವಕೀಲರಿಂದಃ</u>**

ನಮ್ಮ ಮನೆಗೂ ಅಪಘಾತವಾದ ಸ್ಥಳಕ್ಕೂ ಸುಮಾರು 50-100 ಅಡಿ ಅಂತರವಿದೆ. ಗೊರವನಹಳ್ಳಿ ಮುಖ್ಯ ರಸ್ತೆಯಿಂದ ಲೀಲಾವತಿ ಎಕ್ಸಟೆನಷನ್ ನಲ್ಲಿ ನಮ್ಮ ಮನೆ ಮೊದಲನೇ ಮನೆ ಎಂದರೆ ಸರಿ. ನಮ್ಮ ಮನೆಯಿಂದ 4-5 ಮನೆಗಳ ನಂತರ ಅಪಘಾತ ಸ್ಥಳ ಇರುತ್ತದೆ ಎಂದರೆ ಸರಿ. ಅಪಘಾತ ಸ್ಥಳದ ಹತ್ತಿರ ನಾನು ಬರುತ್ತಿದ್ದ ರಸ್ತೆಯ ಎಡಕ್ಕೆ ಒಂದು ದೊಡ್ಡ ಮನೆ ಇದೆ ಎಂದರೆ ಸರಿ. 5 ನೇ ಮೈನ್ ನಿಂದ ವಾಹನಗಳಿಗೆ ನಾನು ಬರುತ್ತಿದ್ದ ರಸ್ತೆಗೆ

ಬರುವವರೆವಿಗೂ ವಾಹನಗಳು ಕಾಣುವುದಿಲ್ಲ ಎಂದರೆ ಸರಿ, ನಾನು ಸದರಿ ದಿನ ನನ್ನ ಬೈಕಿನಲ್ಲಿ ಹೋಗುತ್ತಿದ್ದೆನು. 1 ನೇ ಆರೋಪಿ ನಿಧಾನವಾಗಿಯೇ ಹೋಗುತ್ತಿದ್ದರು, ನಾನು ಪೊಲೀಸರಿಗೆ ಸದರಿ ವಿಚಾರ ತಿಳಿಸಿಲ್ಲ. ನಾನು ಹಾಗೂ ಚಾಸಾ-1 ರವರು ಅಪಘಾತ ಸಂಬಂಧ ಅಲ್ಲಿ ಅಳವಡಿಸಿದ ಸಿಸಿ ಟಿವಿ ಕ್ಯಾಮೆರಾದ ಫುಟೇಜ್ ನೋಡಿರುತ್ತೇವೆ. ಸದರಿ ಫುಟೇಜ್ ಚಾಸಾ-1 ರವರು ಪೊಲೀಸರಿಗೆ ದೂರು ಕೊಡುವ ಸಮಯದಲ್ಲಿ ನೀಡಿರುತ್ತಾರೆ.

ಅಪಘಾತವಾದಾಗ 1 ನೇ ಆರೋಪಿಯ ವಾಹನದ ಎಡಗಡೆ ಹಿಂಭಾಗದ ಮಡ್ ಗಾರ್ಡಿಗೆ 2 ನೇ ಆರೋಪಿಯ ವಾಹನ ಡಿಕ್ಕಿಪಡಿಸಿರುತ್ತದೆ. 2 ನೇ ಆರೋಪಿ ನಿಧಾನವಾಗಿಯೇ ಬರುತ್ತಿದ್ದರು, 1 ನೇ ಆರೋಪಿ ಅತಿವೇಗವಾಗಿ ಚಾಲನೆ ಮಾಡಿಕೊಂಡು ಬಂದು 2 ನೇ ಆರೋಪಿಯ ವಾಹನದ ಮುಂದಿನ ಚಕ್ರಕ್ಕೆ ಡಿಕ್ಕಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಆರೋಪಿಯ ವಾಹನದ ಬಲಗಡೆ ಮುಂಭಾಗದ ಮಡ್ ಗಾರ್ಡಿಗೆ ಜಖಂ ಅಗಿರುತ್ತದೆ ಎಂದರೆ ಸರಿ. ಚಾಸಾ-1 ಹಾಗೂ 1 ನೇ ಆರೋಪಿಯ ಗಂಡ ನನ್ನ ಪರಿಚಯಸ್ಥರು ಎಂದರೆ ಸರಿ, ಅವರ ಮನೆ ನಮ್ಮ ಮನೆಯ ಮುಂಭಾಗದಲ್ಲಿಯೇ ಇದೆ. ಅವರು ಪರಿಚಯಸ್ಥರಾದ ಕಾರಣ ನಾನು 2 ನೇ ಆರೋಪಿಯ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿ ಅತಿ ವೇಗವಾಗಿ ಬರುತ್ತಿರುವುದನ್ನು ನಾನು ನೋಡಿಯೇ ಇಲ್ಲ, ಏಕೆಂದರೆ ನಾನು ಹೋಗುತ್ತಿದ್ದ ರಸ್ತೆಯಲ್ಲಿ ಅವರು ಬರುವುದು ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ.

ಅಪಘಾತವಾದ ತಕ್ಷಣ ಸುತ್ತ ಮುತ್ತಲಿನ ಮನೆಯವರೆಲ್ಲಾರು ಬಂದಿದ್ದರು, ಅವರ ಹೆಸರುಗಳು ಈಗ ನೆನಪಿಲ್ಲ. 1 ನೇ ಆರೋಪಿಯನ್ನು ಕರೆದುಕೊಂಡ ಹೋದ ಕಾರಿನ ಸಂಖ್ಯೆ ಅಥವಾ ಕಾರಿನ ಮಾಲೀಕರ ಹೆಸರು ಗೊತ್ತಿಲ್ಲ. ನಾನು ಸ್ಥಳದಲ್ಲಿ ಇರಲಿಲ್ಲ, ಆದ ಕಾರಣ ಯಾರ ಕಾರಿನಲ್ಲಿ 1 ನೇ ಆರೋಪಿಯನ್ನು ಕರೆದುಕೊಂಡು ಹೋದರು ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಗೆ ಪರಿಹಾರ ದೊರಕಿಸಿಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಕಿವಿಯ ಹತ್ತಿರ ಸ್ವಲ್ಪ ತರುಚಿದ ಗಾಯ ಹಾಗೂ ಬಲಗಾಲಿಗೆ ಸ್ವಲ್ಪ ತರಚಿದ ಗಾಯಗಳಾಗಿತ್ತು, ಪ್ರಜ್ಞೆ ತಪ್ಪಿದ್ದರು, ಅದನ್ನು ಹೊರತು ಪಡಿಸಿ ಬೇರೆ ಎನು ಅಗಿರಲಿಲ್ಲ.

ನಾನು ತಕ್ಷಣವೇ ಚಾಸಾ-1 ರವರಿಗೆ ಅಪಘಾತದ ಸ್ಥಳದಲ್ಲಿಯೇ ಕರೆ ಮಾಡಿರುತ್ತೇನೆ. ಚಾಸಾ-1 ರವರ ಮೊಬೈಲ್ ಸಂಖ್ಯೆ ಹಾಗೂ ಯಾವ ಸಮಯದಲ್ಲಿ ಮಾಡಿರುತ್ತೇನೆ ಎಂದು ಹೇಳಿರುವುದಿಲ್ಲ, ಏಕೆಂದರೆ ಪೊಲೀಸರು ಅದನ್ನು ಕೇಳಿರುವುದಿಲ್ಲ.

1 ನೇ ಆರೋಪಿಯ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. 2 ನೇ ಆರೋಪಿ ನಿಧಾನವಾಗಿ ಎಡಗಡೆ ಬರುತ್ತಿದ್ದರು, 1 ನೇ ಆರೋಪಿಯೇ ಅವರಿಗೆ ಡಿಕ್ಕಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)
ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ